



**ಸಕೀನಾಳ ಮುತ್ತು**
ಕಾದಂಬರಿ
ಲೇ: ವಿವೇಕ ಶಾನಭಾಗ
ಪು: 144 ಬೆ: ₹ 150
ಪ್ರ: ಅಕ್ಷರ ಪ್ರಕಾಶನ
ಹೆಗ್ಗೋಡು, ಸಾಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ – 577 417

ಹೋಗುತ್ತವೆ. ನಿದರ್ಶನಕ್ಕಾಗಿ ಈ ವಾಕ್ಯಗಳನ್ನು ಗಮನಿಸಬಹುದು. "...ನಂತರವೂ ಯಾರೂ ನನಗೆ ಬಿಡಿಸಿ ಹೇಳದಿದ್ದರೂ ಕ್ರಮೇಣ ತುಣುಕುಗಳನ್ನು ಜೋಡಿಸಿ ನನ್ನ ಗ್ರಹಿಕೆ ರೂಪಗೊಂಡಿತು" (ಪು. 62). "ನಾನು ಸಂಕಟವನ್ನು ತಾಳಿಕೊಳ್ಳಲು ಪ್ರಯತ್ನಿಸುತ್ತಿರುವುದು ಕೂಡ ಯಾವುದೋ ಪುಸ್ತಕದಿಂದ ಎತ್ತಿಕೊಂಡ ಸ್ವಭಾವವನ್ನು ಮೈಗೂಡಿಸಿಕೊಳ್ಳಲು ಮಾಡುತ್ತಿರುವ ಕಸರತ್ತಿನಂತೆ ಅವಳಿಗೆ ತೋರುತ್ತಿರಬಹುದೇ?" (ಪು. 7) "ಒಂದೆರಡು ವಾರಗಳಲ್ಲಿ ಒಂದೊಂದಾಗಿ ಶಬ್ದಗಳು ತಮ್ಮ ಅರ್ಥಗಳನ್ನು ಬಿಟ್ಟುಕೊಡತೊಡಗಿ ಅದು ಸರಾಗವಾಗಿ ಓದುವ ಹಂತ ತಲುಪುತ್ತಿತ್ತು. ಆ ಅಡ್ಡತಿಡ್ಡ ಗೆರೆಗಳಿಂದ ಲಿಪಿಯನ್ನು, ಲಿಪಿಯಿಂದ ಶಬ್ದಗಳನ್ನು, ಶಬ್ದಗಳಿಂದ ಅರ್ಥವಿರುವ ವಾಕ್ಯಗಳನ್ನು, ವಾಕ್ಯಗಳಿಂದ ಭಾವಾರ್ಥವನ್ನು ಕಟ್ಟುವುದೆಂದರೆ ನಾಗರಿಕತೆಯಲ್ಲಿ ಭಾಷೆಯು ಬೆಳೆದುಬಂದ ಇಡಿಯ ಪ್ರಯಾಣವನ್ನು ಹೃಸ್ವದಲ್ಲಿ ಹಾದು ಹೋದ ಹಾಗಾಗುತ್ತಿತ್ತು." (ಪು. 93) ಈ ವಾಕ್ಯಗಳಲ್ಲಿ ಅನುಭವವನ್ನು ಗ್ರಹಿಸುವ ಬಗೆಯನ್ನು ವಿವರಿಸಲಾಗಿದೆ.

ಅನುಭವ ಎಂದಾಕ್ಷಣ ಅದನ್ನು ನೋಡಿರಲೇಬೇಕೆಂದಿಲ್ಲ. ಕೇಳಿ, ಓದಿ, ಕೆಲವೊಮ್ಮೆ ಕಲ್ಪನೆಯ ಮೂಲಕ ಅನುಭವಕ್ಕೆ ತಂದುಕೊಂಡು ಭಾಷೆಯಲ್ಲಿ ಅಭಿವ್ಯಕ್ತಗೊಳಿಸಬಹುದು. ಮೊದಲಿಗೆ ಅವು ತುಣುಕುಗಳಾಗಿರುತ್ತವೆ. ಅವುಗಳನ್ನು ಜೋಡಿಸಿದಾಗ ಗ್ರಹಿಕೆಗಳಾಗಿ ರೂಪಗೊಳ್ಳುತ್ತವೆ. ಕಾದಂಬರಿಯಲ್ಲಿ ಈ ಅನುಭವಗಳು ಪಾತ್ರಗಳಾಗಿ, ವಿಚಾರಗಳಾಗಿ, ತಾತ್ವಿಕತೆಯಾಗಿ ಭಾಷೆಯಲ್ಲಿ ಮೈಪಡೆಯುತ್ತವೆ. ಬದುಕು, ಬದುಕಿನ ಸಂಕೀರ್ಣ ಸ್ವರೂಪ, ಚರಿತ್ರೆ, ಸಮಾಜ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ಆರ್ಥಿಕ, ಧಾರ್ಮಿಕ ಇತ್ಯಾದಿಗಳೆಲ್ಲವನ್ನೂ ಕಾದಂಬರಿಯಲ್ಲಿ ಹಿಡಿದಿಡಲು ಸಾಧ್ಯವಾಗುತ್ತದೆ. ಹೀಗಾಗಿ, ಒಂದು ಕಲಾಕೃತಿಯನ್ನು ಓದಿ ಅರ್ಥಮಾಡಿಕೊಳ್ಳಲು ಸಿದ್ಧತೆ ಬೇಕು. ಈ ವಿಚಾರವನ್ನು ರಮಣನ ಪತ್ರಗಳನ್ನು ಓದುವ ಪ್ರಸಂಗದಿಂದ ಅರಿಯಬಹುದು. ಅಂತಣ್ಣ, ರಾಜು, ಪಂಜು ಗುರುದಾಸ, ರಮಣನು ಬರೆದಿರುವ ಪತ್ರಗಳನ್ನು ಓದುತ್ತಾರೆ. ಪ್ರತಿಯೊಬ್ಬರೂ ಒಂದೊಂದು ರೀತಿಯಲ್ಲಿ ಕಲ್ಪಿಸಿಕೊಂಡೋ ಇಲ್ಲದೆ ಇರುವುದನ್ನು ಸೇರಿಸಿಕೊಂಡೋ ಓದಿ ಹೇಳುತ್ತಾರೆ. ಪಂಜು, 'ಸಕೀನಾಳ ಮುತ್ತು', 'ಸಕೀನಾಳ ಭಯವಿಲ್ಲ' ಎಂದೆಲ್ಲಾ ಓದಿದ ಮೇಲೆ ಗುರುದಾಸ ಓದುತ್ತಾನೆ. ಅವನು ಹೆಚ್ಚು ಕಡಿಮೆ ಅರ್ಥವಾಗುವಂತೆ ಸ್ಪಷ್ಟವಾಗಿ ಓದುತ್ತಾನೆ. ಅದು 'ಸಕೀನಾಳ ಮುತ್ತಲ್ಲ'. 'ಸಾವಿನಿಂದ ಮುಕ್ತಿ ಪಡೆಯುವುದು ಲೇಸು' ಅಂದರೆ ಮುತ್ತಿನಿಂದ ಸಾವಿನ ಕಡೆ ಎಲ್ಲರ ಗಮನ